# ಜನಪದ ಸಾಹಿತ್ಯದರ್ಶನ

## ಭಾಗ-೪೪



# ಜನಪದ ನ್ಯಾಯ ಪದ್ಧತಿ


ಸಂಪಾದಕರು

ಪ್ರೊ. ವ್ಹಿ.ಎಲ್. ಪಾಟೀಲ



ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦೨೦

**Janapada Sahitya Darshana : Vol-44** (Collection of articles on Folklore) Editor : Dr. V. L. Patil and Published by : Dr. Harilal Pawar, Director, Prasaranga, Karnatak University, Dharwad-03

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೨೦೨೦

**ISBN**: 978-93-83890-60-6

ಪುಟಗಳು : xxxii + ೧೮೯ = ೨೨೧

ಪ್ರತಿಗಳು : ೬೦೦

ಬೆಲೆ : ₹. ೨೫೦-೦೦

**ಪ್ರಕಾಶಕರು :**
**ಡಾ. ಹರಿಲಾಲ ಪವಾರ**
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಮುದ್ರಕರು :**
**ಡಾ. ವೇದಮೂರ್ತಿ ಎ.ಬಿ.**
ನಿರ್ದೇಶಕರು, ಮುದ್ರಣಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಪರಿವಿಡಿ

**ಸಂಪಾದಕರ ನುಡಿ** – ಪ್ರೊ. ವ್ಹಿ.ಎಲ್. ಪಾಟೀಲ v

**ಆಶಯ ಭಾಷಣ** – ಪ್ರೊ. ಸಿ.ಎಸ್. ಪಾಟೀಲ x

**ಸರ್ವಾಧ್ಯಕ್ಷರ ಭಾಷಣ** – ಪ್ರೊ. ಡಿ.ಬಿ. ನಾಯಕ xiv

೧. ನ್ಯಾಯ ಪದ್ಧತಿಯ ಪರಿಕಲ್ಪನೆ ೧
– **ಡಾ. ವಿಶ್ವನಾಥ ಎಂ.**

೨. ಜನಪದ ನ್ಯಾಯ ಪದ್ಧತಿಯ ಇತಿಹಾಸ ೬
– **ಡಾ. ಎಂ.ಎಸ್. ವೆಂಕಟೇಶ**

೩. ಬುಡಕಟ್ಟುಗಳ ನ್ಯಾಯ ಪದ್ಧತಿ ೧೯
– **ಡಾ. ಗಂಗಾಧರ ದೈವಜ್ಞ**

೪. ಅಲೆಮಾರಿ ಬುಡಕಟ್ಟು ನ್ಯಾಯ ಪದ್ಧತಿ ೬೧
– **ಡಾ. ಬಿ.ಪಿ. ಮಠದ**

೫. ಉತ್ತರ ಕರ್ನಾಟಕದ ಜನಪದ ನ್ಯಾಯ ಪದ್ಧತಿ ೭೦
– **ಡಾ. ಎಚ್.ಎಂ. ಚನ್ನಪ್ಪಗೋಳ**

೬ ದಕ್ಷಿಣ ಕರ್ನಾಟಕದ ಜನಪದ ನ್ಯಾಯ ಪದ್ಧತಿ ೮೧
– **ಡಾ. ಎಂ. ನಂಜಯ್ಯ ಹೊಂಗನೂರು**

೭ ಕರಾವಳಿ ಜನಪದ ನ್ಯಾಯ ಪದ್ಧತಿ ೯೭
– **ಡಾ. ಸೋಮಣ್ಣ ಹೊಂಗಳ್ಳಿ**

೮. ಮಲೆನಾಡು ಜನಪದ ನ್ಯಾಯ ವ್ಯವಸ್ಥೆ ೧೧೭
– **ಡಾ. ಪ್ರಜ್ಞಾ ಮತ್ತೀಹಳ್ಳಿ**

# ೬. ದಕ್ಷಿಣ ಕರ್ನಾಟಕದ ಜನಪದ ನ್ಯಾಯ ಪದ್ಧತಿ

– ಡಾ. ಎಂ.ನಂಜಯ್ಯ ಹೊಂಗನೂರು

---

ಜನಪದರು ಅನಾದಿಕಾಲದಿಂದಲೂ ವೈಯಕ್ತಿಕ ಹಿತಕ್ಕೆ, ಕುಟುಂಬಗಳ ನೆಮ್ಮದಿಗೆ ಹಳ್ಳಿಗಳ ಸ್ವಾಸ್ಥ್ಯ ಮತ್ತು ಶಾಂತಿಗೆ ಹಾಗೂ ಹಾಡಿ ಹಟ್ಟಿಗಳ ಸಾಮರಸ್ಯದ ಒಗ್ಗಟ್ಟಿಗೆ ತಮ್ಮದೇ ಆದ ನ್ಯಾಯಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ವಿವಾದಾಸ್ಪದ ಸಂಗತಿಗಳ ವಿಚಾರಣೆ ನಡೆಸಿ ತೀರ್ಪು ಕೊಡುವುದು ಜನಪದ ನ್ಯಾಯವ್ಯವಸ್ಥೆಯ ಮುಖ್ಯ ಉದ್ದೇಶವಾಗಿದೆ. ಸಮುದಾಯದ ಜನ ಶಾಂತಿ ನೆಮ್ಮದಿಯಿಂದ ಬದುಕಬೇಕು ಎಂದರೆ ಅವರಿಗೆ ನೀತಿ ನಿಯಮಗಳು ಹಾಗೂ ಕಟ್ಟುಪಾಡುಗಳು ಬೇಕಾಗುತ್ತವೆ. ಈ ಬಗೆಯ ಸಾಮಾಜಿಕ ಕಟ್ಟು ಕಟ್ಟಳೆಗಳನ್ನು ಮಾಡುವವರು ಊರಿನ ಪ್ರಮುಖರು. ಅವರನ್ನು ನಾಡಗೌಡ, ಅಥವಾ ದೇಶೀಗೌಡ, ದೇಶಿಶೆಟ್ಟಿ, ಪಟೇಲ, ಶ್ಯಾನುಭೋಗ, ದೊಡ್ಡ ಯಜಮಾನರೆಂದು ಕರೆಯುತ್ತಾರೆ. ನ್ಯಾಯಪಂಚಾಯಿತಿಯನ್ನು ನಡೆಸುವವರಿಗೆ ಕೆಲವುಕಡೆ 'ಕುಲ ಪಂಚರು' ಎಂದೂ ಸಹ ಕರೆಯುವುದುಂಟು. ಇವರಿಗೆ ಪೂರಕವಾಗಿ ಚಿಕ್ಕ ಯಜಮಾನ, ಕುಳವಾಡಿ ಮತ್ತು ಚಲವಾದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹೀಗೆ ಊರಿನ ಹಿರಿಯರು, ತಲೆಬಲಿತವರು, ಬುದ್ಧಿವಂತರು ನಡೆಸುವಂತಹ ನ್ಯಾಯಪದ್ಧತಿಯನ್ನು ಕುಟುಂಬನ್ಯಾಯ, ಕೇರಿನ್ಯಾಯ, ಬೀದಿನ್ಯಾಯ, ಮೊಹಲ್ಲ ಮತ್ತು ವೃತ್ತದ ನ್ಯಾಯ, ಅರಳೀಕಟ್ಟೆ ನ್ಯಾಯ, ಚಾವಡಿ ನ್ಯಾಯ, ಹಳ್ಳಿ ನ್ಯಾಯ, ಊರೊಟ್ಟಿನ ನ್ಯಾಯ, ಮಾರಿಗುಡಿ ನ್ಯಾಯ, ರಂಗಮಂಟಪ ನ್ಯಾಯ, ದೇವಸ್ಥಾನದ ನ್ಯಾಯ, ಕೋಮುವಾರಿ ನ್ಯಾಯ, ಕಟ್ಟೆಮನೆ ನ್ಯಾಯ, ಗಡಿಮನೆ ನ್ಯಾಯ ಮತ್ತು ತೋಪಿನ ನ್ಯಾಯಗಳೆಂದು ಅವುಗಳನ್ನು ಬಗೆ ಬಗೆಯಾಗಿ ಕರೆಯಬಹುದು. ದಕ್ಷಿಣ ಕರ್ನಾಟಕದ ಒಂದೊಂದು ಪ್ರದೇಶದಲ್ಲೂ ಒಂದೊಂದು ಹೆಸರಿನ ನ್ಯಾಯಪಂಚಾಯ್ತಿ ವ್ಯವಸ್ಥೆಗಳು ನಿಷ್ಪಕ್ಷಪಾತ ನ್ಯಾಯ ನಿರ್ಣಯಗಳನ್ನು ನೀಡುತ್ತ ಬಂದಿವೆ.